ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಎದುರುದಾರರ ಪರ ವಕೀಲರಿಂದಃ-

ನಾನು ಪದವಿ ಪೂರ್ಣಗೂಳಿಸಿಲ್ಲ. ಈ ಕೇಸಿನ ವಾದಿ ಮತ್ತು ಪ್ರತಿವಾದಿಗಳು ನನಗೆ ವೈಯಕ್ತಿಕವಾಗಿ ಪರಿಚಯ ಇದ್ದಾರೆ. ಈ ಕೇಸಿನ ವ್ಯವಹಾರ ಸಂಪೂರ್ಣವಾಗಿ ಗೊತ್ತು ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಓದಿ ತಿಳಿದುಕೊಂಡು ನಂತರ ಸಹಿ ಮಾಡಿರುತ್ತೇನೆ. ಅಸಲು ದಾವೆ ಸಲ್ಲಿಸಿದ ನಂತರ ಜಾರಿ ಅರ್ಜಿ ಸಲ್ಲಿಸುವವರೆಗೂ ಎಲ್ಲಾ ವಿಚಾರಗಳು ನನಗೆ ಗೊತ್ತು ಎಂದರೆ ಸರಿ.

ಸಾಕ್ಷಿಗೆ ನಿಪಿ-7ನ್ನು ತೋರಿಸಿ ಇದು ಕ್ರಯದ ಕರಾರು ಪತ್ರವಾಗಿರುತ್ತದೆ ಎಂದು ಕೇಳಿದಾಗ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಇದರಲ್ಲಿ ನಾನು ಸಾಕ್ಷಿದಾರನಾಗಿ ನಾನು ಸಹಿ ಹಾಕಿರುತ್ತೇನೆ. ಅಗ್ರಿಮೆಂಟ್ ಆಗಿದಾಗಿನಿಂದ ವ್ಯವಹಾರ ನನಗೆ ಗೊತ್ತು. ಕ್ರಯದ ಕರಾರು ಪತ್ರದಲ್ಲಿ ಬರೆದ ಎಲ್ಲಾ ವಿಚಾರಗಳು ನನಗೆ ಗೊತ್ತು.

ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನೋಂದಣಾಧಿಕಾರಿಗಳ ಕಛೇರಿಯಲ್ಲಿ 4 ಲಕ್ಷ ಹಣವನ್ನು ಕೊಟ್ಟಿದ್ದಾರೆ ಎಂದರೆ ಹೌದು ಆದರೆ ಅದಕ್ಕೂ ಮೊದಲು 4 4 ಲಕ್ಷ ಹಣವನ್ನು ವ್ಯವಹಾರ ಮಾತನಾಡಿದ ನಂತರ ಕೊಟ್ಟಿರುತ್ತಾರೆ ಎಂದು ನುಡಿಯತ್ತಾರೆ. ನಾನು ವ್ಯವಸಾಯ ಮತ್ತು ಬಾರ್ ನಡೆಸುತ್ತಿದ್ದೇನೆ. ಪ್ರಾಸಾ-1 ಮತ್ತು ನಾನು ವ್ಯವಹಾರ ಮಾಡುತ್ತಿರುವುದರಿಂದ ಬಹಳ ಹತ್ತಿರದವರು ಎಂದರೆ ಸರಿಯಲ್ಲ. ಪ್ರಾಸಾ-1ರವರಿಗೆ ಸಹಾಯ ಮಾಡುವ ಉದ್ದೇಶದಿಂದ ತಪ್ಪು ಮಾಹಿತಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಕರಾರು ಪತ್ರವಾಗಿರುವ

ವಿಚಾರ ಮಾತ್ರ ನನಗ ಗೊತ್ತು ಕರಾರು ಪತ್ರವಾದ ನಂತರ ಏನಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಹೌದು ಆದರೆ ಅವರು ಬಡ್ಡಿಗೆ ಹಣ ಪಡೆದುಕೊಂಡಿದ್ದರು ಎಂದು ಮುಂದುವೆದು ಸಾಕ್ಷಿ ನುಡಿಯುತ್ತಾರೆ. ಕರಾರು ಪತ್ರವನ್ನು ಆಸ್ತಿಯ ವ್ಯಾಪಾರಕ್ಕೆ ನಾನು ಹೇಳುವಂತೆ ಬಡ್ಡಿ ವ್ಯವಹಾರಕ್ಕೆ ಅಲ್ಲ ಎಂದರೆ ಸರಿಯಲ್ಲ.

ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ನೋಟರಿಯನ್ನು ಎಲ್ಲಿ ಮಾಡಿಸಿರುತ್ತೀರಾ ಎಂದರೆ ನನಗೆ ನೆನಪಿಲ್ಲ. ನಂತರ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.